ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಶನಿವಾರ, ೦೧, ಆಗಸ್ಟ್, ೨೦೨೬ (ಶ್ರಾವಣ, ೧೦, ಶಕವರ್ಷ, ೧೯೪೮)	ಸಂಚಿಕೆ ೧೫೦
Volume - 161	BENGALURU, SATURDAY, 01, AUGUST, 2026 (SHRAVANA , 10, SHAKAVARSHA, 1948)	Issue 150

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ 2026-2027ನೇ ಹಂಗಾಮಿನ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಲು ದಿನಾಂಕವನ್ನು ನಿಗದಿಪಡಿಸುವ ಬಗ್ಗೆ.

ಓದಲಾಗಿದೆ : ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ ಡಿಇವಿ/ಕಅಪ/ಇತರೆ/243/2026-27, ದಿನಾಂಕ:26.05.2026.

****

ಪ್ರಸ್ತಾವನೆ:-

ಮೇಲೆ ಓದಲಾದ ಪತ್ರದಲ್ಲಿ ರಾಜ್ಯದ ದಕ್ಷಿಣ ಭಾಗದ ಸಕ್ಕರೆ ಕಾರ್ಖಾನೆಗಳು ಜುಲೈ-ಆಗಸ್ಟ್ ಮಾಹೆಯಲ್ಲಿ ಹಾಗೂ ಉತ್ತರ ಭಾಗದ ಸಕ್ಕರೆ ಕಾರ್ಖಾನೆಗಳು ಅಕ್ಟೋಬರ್- ನವೆಂಬರ್ ಮಾಹೆಯಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸುವುದು ವಾಡಿಕೆಯಾಗಿರುತ್ತದೆ. ಕೆಲವೊಂದು ಸಕ್ಕರೆ ಕಾರ್ಖಾನೆಗಳು ಇತರೆ ಕಾರ್ಖಾನೆಗಳೊಂದಿಗೆ ಸ್ಪರ್ಧೆಗಿಳಿದು ಕಬ್ಬು ಅರೆಯುವ ಕಾರ್ಯವನ್ನು ಬೇಗನೇ ಪ್ರಾರಂಭ ಮಾಡುವುದರಿಂದ ಕಬ್ಬು ಸಂಪೂರ್ಣ ಮಾಗದೇ ಇಳುವರಿ ಕಡಿಮೆಯಾಗುತ್ತದೆ. ಇದು ಸಕ್ಕರೆ ಮತ್ತು ಇತರೆ ಉತ್ಪನ್ನಗಳ ಉತ್ಪಾದನೆಗಳ ಮೇಲೆ ಪರಿಣಾಮ ಬೀರುತ್ತದೆ. ನೆರೆಯ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬೆಳೆದಂತಹ ಕಬ್ಬನ್ನು ಅನಧೀಕೃತವಾಗಿ ಮತ್ತು ಕಾನೂನುಬಾಹಿರವಾಗಿ ನುರಿಸುವುದರಿಂದಾಗಿ ಕಾರ್ಖಾನೆಗಳ ಮಧ್ಯೆ ಅನಾರೋಗ್ಯಕರ ಮತ್ತು ಕಾನೂನಾತ್ಮಕ ತೊಡಕುಗಳು ಉಂಟಾಗುತ್ತಿವೆ.

ಆದುದರಿಂದ, 2026-2027ನೇ ಸಾಲಿನ ಕಬ್ಬು ಅರೆಯುವ ಕಾರ್ಯವನ್ನು **ಜುಲೈ-2026 ಮೊದಲನೇ ವಾರದಿಂದ ಪ್ರಾರಂಭಿಸುವುದು ಸೂಕ್ತವಾಗಿರುತ್ತದೆ ಎಂದು** ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ

ಸರ್ಕಾರವು ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ 2026-2027ನೇ ಹಂಗಾಮಿನ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಲು ಕೆಳಕಂಡಂತೆ ದಿನಾಂಕವನ್ನು ನಿಗದಿಪಡಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 236 ಎಸ್‌ಜಿಎಫ್ 2026
ಬೆಂಗಳೂರು, ದಿನಾಂಕ:06ನೇ ಜುಲೈ2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ 2026-27ನೇ ಹಂಗಾಮಿನ ಕಬ್ಬು ನುರಿಸುವ ಕಾರ್ಯವನ್ನು **ದಿನಾಂಕ:10.07.2026** ರಿಂದ ಪ್ರಾರಂಭಿಸಲು ಅನುಮತಿ ನೀಡಿ ಆದೇಶಿಸಿದೆ.

ಈ ಆದೇಶದ ಅನುಪಾಲನೆಯನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳು ಖಾತರಿಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-247

ಕರ್ನಾಟಕ ಸರ್ಕಾರ

ಸಂಖ್ಯೆಃ ಕಂಇ 37 ಮುಆಬಿ 2026

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 23.06.2026

ಸುತ್ತೋಲೆ

ವಿಷಯ:- ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997 ಸೆಕ್ಷನ್ 31(7) ರ ಅಡಿಯಲ್ಲಿ ಅಧಿಸೂಚಿತ ದೇವಾಲಯಗಳ ಸ್ಥಿರ ಸ್ವತ್ತುಗಳ ವಿವರಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಬಗ್ಗೆ ಸೂಚನೆಗಳು.

*****

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ, 1997ರ ಕಲಂ 31(7) ಅಡಿಯಲ್ಲಿ ಸಹಾಯಕ ದತ್ತಿ ಸಮೀಕ್ಷಾ ಅಧಿಕಾರಿಗಳು ತಮ್ಮ ಜಿಲ್ಲಾ ವ್ಯಾಪ್ತಿಯ ಅಧಿಸೂಚಿತ ಮುಜರಾಯಿ ದೇವಾಲಯಗಳ ಹಾಗೂ ಅವುಗಳ ಆಸ್ತಿಗಳ ಅಳತೆ ಕೆಲಸ ನಿರ್ವಹಿಸಿ ಅಳತೆ ನಕ್ಷೆ ಮತ್ತು ನಮೂನೆ 1((ಸಿ) ಗಳನ್ನು ಸಿದ್ಧಪಡಿಸಿ ಆಯುಕ್ತರು, ಧಾರ್ಮಿಕ ದತ್ತಿ

ಇಲಾಖೆಗೆ ಕಳುಹಿಸಬೇಕಾಗಿರುತ್ತದೆ ಹಾಗೂ ಸದರಿ ಕಡತವನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ಸರ್ಕಾರಕ್ಕೆ ಆಯುಕ್ತರು ರವಾನಿಸಬೇಕಾಗಿರುತ್ತದೆ.

ಸದರಿ ಕೆಲಸವು ವಿಳಂಬವಾಗುತ್ತಿರುವುದು ಮತ್ತು ನಮೂನೆ 1(ಸಿ) ಯನ್ನು ಕ್ರಮಬದ್ಧವಾಗಿ ಭರ್ತಿ ಮಾಡದೇ ಇರುವುದು, E-office ಮುಖಾಂತರ ಕಡತ ಸಲ್ಲಿಸದೆ ಇರುವುದು ಹಾಗೂ ಒಂದೇ ತರವಾದ ವಿಧಾನವನ್ನು ರಾಜ್ಯಾದ್ಯಂತ ಸ್ಥಳೀಯ ಅಧಿಕಾರಿಗಳು ಪಾಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ವಿಷಯವನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಇನ್ನು ಮುಂದೆ ಈ ಕೆಳಕಂಡಂತೆ ಸೂಚನೆಗಳನ್ನು ಅನುಸರಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಅ. ನಿಗಧಿತ ನಮೂನೆ 1(ಸಿ) ಭರ್ತಿ ಮಾಡಲು ಜಿಲ್ಲಾ ಮಟ್ಟದ ಮುಜರಾಯಿ ಸಿಬ್ಬಂದಿ/ಸಹಾಯಕ ದತ್ತಿ ಸಮೀಕ್ಷಾ ಅಧಿಕಾರಿಗಳು (ಡಿ.ಡಿ.ಎಲ್.ಆರ್.) ಅನುಸರಿಸಬೇಕಾದ ಕ್ರಮಗಳು:-

ಅನುಬಂಧದಲ್ಲಿ ಲಗತ್ತಿಸಿರುವ ಚೆಕ್ ಲಿಸ್ಟ್‌ನಂತೆ ಭರ್ತಿ ಮಾಡಿ ತಾಲ್ಲೂಕುವಾರು ಹಾಗೂ ದೇವಾಲಯವಾರು ಕಡತವನ್ನು ನೇರವಾಗಿ E-office ಮುಖಾಂತರ ಆಯುಕ್ತರ ಕಾರ್ಯಲಯದ E-officeನಲ್ಲಿಯೇ ಸಲ್ಲಿಸಬೇಕು (ಕಡ್ಡಾಯವಾಗಿ ನುಡಿ 6.0 Soft copyಯೊಂದಿಗೆ). ಇನ್ನು ಮುಂದೆ ಭೌತಿಕ ಕಡತಗಳನ್ನು ಆಯುಕ್ತರ ಕಚೇರಿಯಲ್ಲಿ ಸ್ವೀಕರಿಸಬಾರದು ಹಾಗೂ ಅಪೂರ್ಣತೆಯಿಂದ ಕೂಡಿದ ಕಡತಗಳನ್ನು E-officeನಲ್ಲಿ upload ಮಾಡತಕ್ಕದ್ದಲ್ಲ ಆದ್ದರಿಂದ, ಈ ಕೆಳಕಂಡ ಸೂಚನೆಗಳನ್ನು ಪಾಲನೆ ಮಾಡಲು ಸೂಚಿಸಿದೆ.

1. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳುಮತ್ತುಧರ್ಮದಾಯ ದತ್ತಿಗಳ ಅಧಿನಿಯಮ, 1997 ರ ಸೆಕ್ಷನ್ 23 ರಂತೆ ದೇವಾಲಯವು ಅಧಿಸೂಚಿತ ದೇವಾಲಯವಾಗಿರಬೇಕು ಹಾಗೂ ಅಧಿಸೂಚನೆಯಲ್ಲಿರುವ ಪುಟ ಸಂಖ್ಯೆ /ಕ್ರಮ ಸಂಖ್ಯೆ ಕಡತದಲ್ಲಿ ನಮೂದಿಸಬೇಕು.
2. ನಮೂನೆ 1(ಸಿ)ಯಲ್ಲಿ ದೇವಾಲಯದ ಹೆಸರು/ಗ್ರಾಮ/ಹೋಬಳಿ/ತಾಲ್ಲೂಕು/ ಜಿಲ್ಲೆಯ ಹೆಸರು ಕಡ್ಡಾಯವಾಗಿ ದಾಖಲಿಸಬೇಕು.
3. Sketch ನಲ್ಲಿರುವ ದೇವಾಲಯದ ಹೆಸರು/ಗ್ರಾಮ/ಹೋಬಳಿ/ತಾಲ್ಲೂಕು/ಜಿಲ್ಲೆಯ ಹೆಸರು/ವಿಸ್ತೀರ್ಣ ಹಾಗೂ ಚೆಕ್ ಬಂದಿ, ನಮೂನೆ 1(ಸಿ)ಯಲ್ಲಿ ಭರ್ತಿ ಮಾಡಿರುವ ಗ್ರಾಮ/ಹೋಬಳಿ/ತಾಲ್ಲೂಕು/ಜಿಲ್ಲೆಯ ಹೆಸರು/ದೇವಾಲಯದ ಹೆಸರು/ವಿಸ್ತೀರ್ಣ ಹಾಗೂ ಚೆಕ್‌ಬಂದಿ ಒಂದೇ ಆಗಿರಬೇಕು.
4. ನಮೂನೆ 1(ಸಿ)ರ ಕಾಲಂ 1 ರಲ್ಲಿ ಪ್ರತಿ ಆಸ್ತಿ, ಅದು ಹೊಂದಿರುವ, ಖಾತೆ ಸಂಖ್ಯೆ/ ಸರ್ವೆ ನಂ./ ಸಿಟಿಎಸ್ ನಂ./ ಮುನ್ಸಿ ನಂ./ ಸ್ವಾಮಿತ್ವ ಸಂಖ್ಯೆ/ ಯುಪಿಓಆರ್ ನಂ./ ಬಿಎಸ್‌ಎಸ್ ನಂ./ ಖಾನೇಷುಮಾರಿ ನಂ./ ಆಸ್ತಿ ನಂ. ಇವುಗಳಲ್ಲಿ ಯಾವುದು ಅನ್ವಯವಾಗುತ್ತದೆಯೋ ಅದನ್ನು ಕಡ್ಡಾಯವಾಗಿ ಭರ್ತಿ ಮಾಡಬೇಕು.
5. ನಮೂನೆ 1(ಸಿ)ರ ಕಾಲಂ 2 ರಲ್ಲಿ ಪ್ರತಿ ಆಸ್ತಿ, ಅದು ಹೊಂದಿರುವ ಒಟ್ಟು ಕ್ಷೇತ್ರದ ವಿಸ್ತೀರ್ಣವನ್ನು ಚದರ ಮೀಟರ್ ನಲ್ಲಿ ಅಥವಾ ಎಕರೆ-ಗುಂಟೆ/ಸೆಂಟ್ಸ್‌ನಲ್ಲಿಯೇ ನಮೂದಿಸಬೇಕು.
6. ನಮೂನೆ 1(ಸಿ)ರ ಕಾಲಂ 3 ರಲ್ಲಿ ಸದರಿ ದೇವಾಲಯ ಆಸ್ತಿಯು ಯಾವ ಗ್ರಾಮ/ ನಗರ/ ಪಟ್ಟಣದಲ್ಲಿ ಇದೆ ಎಂಬುದನ್ನು ಕಡ್ಡಾಯವಾಗಿ ಭರ್ತಿ ಮಾಡಬೇಕು.
7. ನಮೂನೆ 1(ಸಿ)ರ ಕಾಲಂ 4 ರಲ್ಲಿ ಆ ಆಸ್ತಿಯ ಪೂರ್ವ, ಪಶ್ಚಿಮ, ಉತ್ತರ ಹಾಗೂ ದಕ್ಷಿಣ ದಿಕ್ಕಿಗಳಲ್ಲಿ ಸ್ಥಳದಲ್ಲಿ ಇರುವಂತೆ ಚೆಕ್‌ಬಂದಿಯನ್ನು ನಮೂದಿಸಬೇಕು ಹಾಗೂ ಈ ಚೆಕ್‌ಬಂದಿಯು ಸರ್ವೆ Sketch ನಲ್ಲಿರುವ ಚೆಕ್ ಬಂದಿಗೂ ತಾಳೆ ಇರಬೇಕು.

8. ನಮೂನೆ 1(ಸಿ)ರ ಕಾಲಂ 5 ರಲ್ಲಿ ಆ ದೇವಾಲಯ/ ಆಸ್ತಿಯ ಸ್ವತ್ತಿನ ವಿವರದಲ್ಲಿ ಕಟ್ಟಡದ ಕ್ಷೇತ್ರ ಹಾಗೂ ಖಾಲಿಯಿರುವ ಕ್ಷೇತ್ರವನ್ನು ಪ್ರತ್ಯೇಕವಾಗಿ ನಮೂದಿಸತಕ್ಕದ್ದು.
9. ನಮೂನೆ 1(ಸಿ)ರ ಕಾಲಂ 6 ರಲ್ಲಿ ಸದರಿ ಆಸ್ತಿಯು ಆ ದೇವಾಲಯಕ್ಕೆ ಹೇಗೆ ಬಂದಿದೆ ಎಂಬ ಬಗ್ಗೆ (ಅರ್ಜಿಸಿದ ವಿಧಾನವನ್ನು (Mode of Acquisition)) ದಾಖಲಿಸಬೇಕು.
10. ನಮೂನೆ 1(ಸಿ)ರ ಕಾಲಂ 7 ರಲ್ಲಿ ಆ ಆಸ್ತಿಯ ಪ್ರಚಲಿತ ಮಾರುಕಟ್ಟೆ ಬೆಲೆ ಲಭ್ಯವಿದ್ದಲ್ಲಿ ಭರ್ತಿ ಮಾಡತಕ್ಕದ್ದು(ಸ್ವತ್ತಿನ ಮೌಲ್ಯ).
11. ನಮೂನೆ 1(ಸಿ)ರ ಕಾಲಂ 8 ರಲ್ಲಿ ಈ ಆಸ್ತಿಯ ನಮೂನೆ 1(ಸಿ)ಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಯಾವುದಾದರೂ ವಿವಾದಗಳು ಉಂಟಾದಲ್ಲಿ ಅಂತಹ ವಿವಾದವನ್ನು ಸರ್ವೆ ಅಧಿಕಾರಿಯು ಬಗೆಹರಿಸಿದ ವಿವಾದಗಳು ಯಾವುದಾದರೂ ಇದ್ದಲ್ಲಿ ದಾಖಲಿಸುವುದು.
12. ನಮೂನೆ 1 (ಸಿ) ಯಲ್ಲಿ ಕಡ್ಡಾಯವಾಗಿ ಭೂಮಾಪಕರು, ಭೂದಾಖಲೆಗಳ ಸಹಾಯಕ ನಿರ್ದೇಶಕರು, ತಹಶೀಲ್ದಾರ್ ಹಾಗೂಸಹಾಯಕ ದತ್ತಿ ಸಮೀಕ್ಷಾ ಅಧಿಕಾರಿಗಳ/ ಡಿ.ಡಿ.ಎಲ್.ಆರ್. ಸಹಿ ಇರಬೇಕು.

ಆ. ನಿಗಧಿತ ನಮೂನೆ 1(ಡಿ) ಭರ್ತಿ ಮಾಡಲು ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರ ಕಚೇರಿಯ ಸಿಬ್ಬಂದಿ/ದತ್ತಿ ಸಮೀಕ್ಷಾ ಅಧಿಕಾರಿಗಳು ಅನುಸರಿಸಬೇಕಾದ ಕ್ರಮಗಳು:-

1. ಇನ್ನು ಮುಂದೆ E-office ಮುಖಾಂತರವೇ ಜಿಲಾಧಿಕಾರಿಗಳ ಕಾರ್ಯಲಯ/ಸಹಾಯಕ ದತ್ತಿ ಸಮೀಕ್ಷಾ ಅಧಿಕಾರಿಗಳಿಂದ/ಡಿ.ಡಿ.ಎಲ್.ಆರ್ ನಮೂನೆ 1(ಸಿ) ಹಾಗೂ ಸರ್ವೆ ನಕ್ಷೆ ಹಾಗೂ ಇತರೆ ದಾಖಲೆಗಳನ್ನು ಪಡೆಯತಕ್ಕದ್ದು.
2. ಆಯುಕ್ತರ ಕಚೇರಿಯಲ್ಲಿರುವ ಸಿಬ್ಬಂದಿಗೆ ಒಂದು ವಿಭಾಗಕ್ಕೆ ಒಬ್ಬರು ಭೂಮಾಪಕರನ್ನು ನಿಯೋಜಿಸಿ E-office ಮುಖಾಂತರ ಕಡತಗಳನ್ನು ಮೇಲಧಿಕಾರಿಗೆ ಮಂಡಿಸಬೇಕು.
3. ಆಯುಕ್ತರಿಂದ ಅನುಮೋದನೆಗೊಂಡ ನಮೂನೆ 1(ಸಿ)ಯನ್ನು ಆಧರಿಸಿ ನಮೂನೆ 1(ಡಿ) ಯನ್ನು ತಯಾರಿಸತಕ್ಕದ್ದು
4. ತಾಲ್ಲೂಕುವಾರು ನಮೂನೆ 1(ಡಿ) ಸಿದ್ದಗೊಂಡಂತೆ ಸರ್ಕಾರಕ್ಕೆ ಅಧಿಸೂಚನೆ ಹೊರಡಿಸುವುದಕ್ಕೆ E-office ಮುಖಾಂತರ ಸಲ್ಲಿಸತಕ್ಕದ್ದು.

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಕಂದಾಯ ಇಲಾಖೆ

ಅನುಬಂಧ-01
ಚೆಕ್ ಲಿಸ್ಟ್

ಕ್ರಮ ಸಂಖ್ಯೆ	ವಿವರಣೆ	ಹೌದು/ಇಲ್ಲ
1	ಸದರಿ ದೇವಾಲಯ ಅಧಿಸೂಚಿತ ದೇವಾಲಯ ಪಟ್ಟಿಯಲ್ಲಿ ಇದಯೇ?	ಹೌದು/ಇಲ್ಲ ಕ್ರಮ ಸಂಖ್ಯೆ: ಪುಟ ಸಂಖ್ಯೆ:
2	Sketch ನಲ್ಲಿರುವ ಗ್ರಾಮದ ಹೆಸರು,ದೇವಾಲಯದ ಹೆಸರು ನಮೂನೆ 1 (ಸಿ)ಯಲ್ಲಿ ಭರ್ತಿ ಮಾಡಿರುವ ಗ್ರಾಮದ ಹೆಸರು,ದೇವಾಲಯದ ಹೆಸರು ಒಂದೇ ಆಗಿದಯೇ?	ಹೌದು/ಇಲ್ಲ
3	Sketch ನಲ್ಲಿರುವ ವಿಸ್ತೀರ್ಣ ನಮೂನೆ 1 (ಸಿ)ಯಲ್ಲಿರುವ ವಿಸ್ತೀರ್ಣ ಒಂದೇ ಆಗಿದಯೇ?	ಹೌದು/ಇಲ್ಲ

4	Sketch ನಲ್ಲಿರುವ ಚೆಕ್ ಬಂದಿ ನಮೂನೆ 1 (ಸಿ)ಯಲ್ಲಿರುವ ಚೆಕ್ ಬಂದಿ ಒಂದೇ ಆಗಿದಯೇ?	ಹೌದು/ಇಲ್ಲ
5	ಪ್ರತಿ ಆಸ್ತಿ /ದೇವಾಲಯ ಅದು ಹೊಂದಿರುವ, ಖಾತೆ ಸಂಖ್ಯೆ/ಸರ್ವೆ ನಂ/ಸಿಟಿಎಸ್ ನಂ/ಮುನ್ಸಿ ನಂ/ಸ್ವಾಮಿತ್ವ ಸಂಖ್ಯೆ/ಯುಪಿಓಆರ್/ವಿಎಸ್ಎಸ್ನಂ/ಖಾನೇಷುಮಾರಿ ನಂ/ಆಸ್ತಿಸಂಖ್ಯೆ ಇವುಗಳಲ್ಲಿ ಅನ್ವಯವಾಗುವುದನ್ನು ನಮೂನೆ 1 (ಸಿ)ಯಲ್ಲಿ ನಮೂದಿಸಲಾಗಿದಯೇ?	ಹೌದು/ಇಲ್ಲ
6	ವಿಸ್ತೀರ್ಣಗಳು ಚದರ ಮೀಟರ್ ನಲ್ಲಿ ಅಥವಾ ಎಕರೆ-ಗುಂಟೆ/ಸೆಂಟ್ಸ್ ನಲ್ಲಿಯೇ ಇದಯೇ?	ಹೌದು/ಇಲ್ಲ
7	ಸದರಿ ದೇವಾಲಯ/ಆಸ್ತಿಯು ಯಾವ ಗ್ರಾಮ/ ನಗರ/ ಪಟ್ಟಣರಲ್ಲಿ ಇದೆ ಎಂಬುದನ್ನು ಕಡ್ಡಾಯವಾಗಿ ಭರ್ತಿ ಮಾಡಲಾಗಿದಯೇ?	ಹೌದು/ಇಲ್ಲ
8	ಆ ಆಸ್ತಿಯ/ದೇವಾಲಯದ ಸ್ವತ್ತಿನ ವಿವರದಲ್ಲಿ ಕಟ್ಟಡದ ಕ್ಷೇತ್ರ ಹಾಗೂ ಖಾಲಿಯಿರುವ ಕ್ಷೇತ್ರವನ್ನು ಪ್ರತ್ಯೇಕವಾಗಿ ನಮೂದಿಸಲಾಗಿದಯೇ	ಹೌದು/ಇಲ್ಲ
9	ಸದರಿ ಆಸ್ತಿಯು ಆ ದೇವಾಲಯಕ್ಕೆ ಹೇಗೆ ಬಂದಿದೆ ಎಂಬ ಬಗ್ಗೆ (ಅರ್ಜಿಸಿದ ವಿಧಾನವನ್ನು (Mode of Acquisition)) ದಾಖಲು ಮಾಡಲಾಗಿದಯೇ	ಹೌದು/ಇಲ್ಲ
10	ಆ ಆಸ್ತಿಯ ಪ್ರಚಲಿತ ಮಾರುಕಟ್ಟೆ ಬೆಲೆ ಲಭ್ಯವಿದ್ದಲ್ಲಿ ನಮೂದಿಸಲಾಗಿದಯೇ? (ಸ್ವತ್ತಿನ ಮೌಲ್ಯ)	ಹೌದು/ಇಲ್ಲ
11	ಈ ಆಸ್ತಿಯ ನಮೂನೆ 1(ಸಿ)ಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಯಾವುದಾದರೂ ವಿವಾದಗಳು ಉಂಟಾದಲ್ಲಿ ಅಂತಹ ವಿವಾದವನ್ನು ಸರ್ವೆ ಅಧಿಕಾರಿಯು ಬಗೆಹರಿಸಿದ ವಿವಾದಗಳು ಯಾವುದಾದರೂ ಇದ್ದಲ್ಲಿ ದಾಖಲುಮಾಡಲಾಗಿದಯೇ?	ಹೌದು/ಇಲ್ಲ
12	ನಮೂನೆ 1 (ಸಿ) ಯಲ್ಲಿ ಕಡ್ಡಾಯವಾಗಿ ಭೂಮಾಪಕರು, ಭೂದಾಖಲೆಗಳ ಸಹಾಯಕ ನಿ ರ್ದೇಶಕರು, ತಹಶೀಲ್ದಾರ್ ಹಾಗೂ ಸಹಾಯಕ ದತ್ತಿ ಸಮೀಕ್ಷಾ ಅಧಿಕಾರಿಗಳ ಸಹಿ ಮಾಡಲಾಗಿದಯೇ?	ಹೌದು/ಇಲ್ಲ

ಮುಜರಾಯಿ ಅಧಿಕಾರಿ ಸಹಿ

ಸಹಾಯಕ ದತ್ತಿ ಸಮೀಕ್ಷಾ ಅಧಿಕಾರಿ
ಹಾಗೂ DDLR ಸಹಿ

PR-248

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಲಸಂಪನ್ಮೂಲ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ರ ನೇಮಕಾತಿ ವಿಧಾನವನ್ನು ನಿಗಧಿಪಡಿಸುವ ಕುರಿತು - ಕಾರ್ಯಕಾರಿ ಆದೇಶ.

ಓದಲಾಗಿದೆ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ 293 ಸೇಸಕಿ 2005, ದಿನಾಂಕ:03.12.2014
2. ಸರ್ಕಾರದ ಆದೇಶ ಸಂಖ್ಯೆ: ಜಸಂಇ 114 ಎಸ್ಇಎಸ್ 2023 (ಇ) ದಿನಾಂಕ:04.03.2026

****

ಪ್ರಸ್ತಾವನೆ:

1. ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ: 03-12-2014 ರ ಸರ್ಕಾರದ ಅಧಿಸೂಚನೆಯಲ್ಲಿ ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು

ಪ್ರಕಟಿಸಲಾಗಿದೆ. ಇದು ದಿನಾಂಕ: 11-12-2014 ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿದೆ. ಅದರಂತೆ, ಜಲಸಂಪನ್ಮೂಲ ಇಲಾಖೆಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ವೃಂದದಲ್ಲಿನ ಹುದ್ದೆಗಳನ್ನು ನೇರ ನೇಮಕಾತಿ / ಮುಂಬಡ್ತಿ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

2. ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ದಿನಾಂಕ:04.03.2026 ರ ಸರ್ಕಾರದ ಆದೇಶದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಜಸಂಇ 293 ಸೇಸಕಿ 2005, ದಿನಾಂಕ:03-12-2014 ರನ್ವಯ ಜಾರಿಗೆ ಬಂದಿರುವ ಕರ್ನಾಟಕ ಜಲಸಂಪನ್ಮೂಲ ಸೇವೆಗಳು (ನೇಮಕಾತಿ) ನಿಯಮಗಳು, 2014 ರ ಅನುಸೂಚಿ-I ರ ನಿಯಮ-5 ರಲ್ಲಿ ನಮೂದಿಸಲಾಗಿರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ಗಳ ನೇಮಕಾತಿಗೆ ಸಂಬಂಧಿಸಿದಂತೆ, ಅನುಸೂಚಿಯ ಅಂಕಣ (6) ರಲ್ಲಿ ವಿದ್ಯಾರ್ಹತೆಯನ್ನು ಹಾಗೂ ಅನುಸೂಚಿ-II, SCHEME OF EXAMINATION ಸಂಬಂಧಿಸಿದಂತೆ Karnataka Water Resource Services (Recruitment of Assistant Executive Engineers Division-I by Competitive examination) Scheme ನಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1)(ಸಿವಿಲ್) & (ಮೆಕ್ಯಾನಿಕಲ್) ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ನೇಮಕಾತಿ ವಿಧಾನ, ಪಠ್ಯ ಕ್ರಮಗಳನ್ನು ಅಳವಡಿಸುವ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ವಿಧಾನವನ್ನು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ.

3. ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ SHEDULE-II ರಲ್ಲಿನ ನಿಯಮ 4 ಮತ್ತು 9 ರ ನಿಯಮಗಳಲ್ಲಿನ ಉದ್ಧೃತ ಭಾಗವು ಕೆಳಕಂಡಂತಿದೆ;

> **4. Method of Recruitment**- Recruitment under this scheme shall be made on the basis of the academic merit and merit secured in the competitive examination conducted by the Commission. The competitive examination shall be held on such dates and at such places as may be notified by the Commission from time to time.
>
> **9. List of selected candidates**- The commission shall prepare a final selection list of candidates eligible for appointment in the order of merit, on the basis of the aggregate of the percentage of the total marks secured in the written examination and of the marks secured in the personality test and taking into consideration the orders in force relating to reservation of appointments and posts for schedule caste, schedule tribe, other backward classes and others.

4. ಸದರಿ ಮೇಲಿನ ನಿಯಮಗಳಂತೆ ಪರಿಶೀಲಿಸಲಾಗಿ, ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ SHEDULE-II ರಲ್ಲಿನ ನಿಯಮ-4 ರಲ್ಲಿ **ಶೈಕ್ಷಣಿಕ ಅರ್ಹತೆ ಹಾಗೂ** ಆಯೋಗವು **ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಆಧಾರದಲ್ಲಿ** ನೇಮಕಾತಿಯನ್ನು ಮಾಡಲು ಹಾಗೂ SHEDULE-II ರಲ್ಲಿನ ನಿಯಮ-9 ರಲ್ಲಿ ಆಯೋಗವು ನಡೆಸುವ **ಲಿಖಿತ ಪರೀಕ್ಷೆಯಲ್ಲಿ ಪಡೆದ ಒಟ್ಟು ಶೇಕಡಾವಾರು ಅಂಕಗಳು ಮತ್ತು ವ್ಯಕ್ತಿತ್ವ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಪರಿಗಣಿಸಿ** ಅರ್ಹ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಲು ಅವಕಾಶ ಕಲ್ಪಿಸಲಾಗಿದೆ.

5. ನೇಮಕಾತಿ ಮಾಡುವ ಹಾಗೂ ಆಯ್ಕೆ ಪಟ್ಟಿ ತಯಾರಿಸಲು ಅನುಸರಿಸಬೇಕಾದ ಮಾನದಂಡಗಳ ಬಗ್ಗೆ ಈ ಎರಡೂ ನಿಯಮಗಳಲ್ಲಿ ವ್ಯತಿರಿಕ್ತ ಅಂಶಗಳು ಕಂಡುಬರುತ್ತಿದ್ದು,

ನೇಮಕಾತಿ ವಿಧಾನ ಹಾಗೂ ಆಯ್ಕೆ ಪಟ್ಟಿ ಸಿದ್ಧಪಡಿಸುವ ಕುರಿತಂತೆ ಸದರಿ ನಿಯಮಗಳಿಗೆ ಸೂಕ್ತ ಮಾರ್ಪಾಡು / ತಿದ್ದುಪಡಿ ತರುವ ಅವಶ್ಯಕತೆ ಇರುವುದಾಗಿ ಸರ್ಕಾರವು ಮನಗಂಡಿರುತ್ತದೆ.

6. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ, ಜಲಸಂಪನ್ಮೂಲ ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳ ಷೆಡ್ಯೂಲ್-II ರಲ್ಲಿನ ನಿಯಮ-4 ಮತ್ತು 9 ರಲ್ಲಿನ ಅಂಶಗಳಿಗೆ ಈ ಕೆಳಕಂಡಂತೆ ಮಾರ್ಪಾಡು ಮಾಡಲು ತೀರ್ಮಾನಿಸಿ, ಕಾರ್ಯಕಾರಿ ಆದೇಶ ಹೊರಡಿಸಲು ಸರ್ಕಾರವು ನಿರ್ಧರಿಸಿದೆ.

ಪ್ರಸ್ತುತ ಇರುವ ನಿಯಮಗಳು	ಪ್ರಸ್ತಾಪಿತ ತಿದ್ದುಪಡಿ
4. Method of Recruitment: Recruitment under this scheme shall be made on the basis of the academic merit and merit secured in the competitive examination conducted by the Commission. The competitive examination shall be held on such dates and at such places as may be notified by the Commission from time to time.	**4. Method of Recruitment:** Recruitment under this scheme shall be made **on the basis of academic qualifications and the total marks secured in the written examination and the marks secured in the personality test conducted by the commission.** The competitive examination shall be held on such dates and at such places as may be notified by the Commission from time to time.
9. List of selected candidates: The commission shall prepare a final selection list of candidates eligible for appointment in the order of merit, on the basis of the aggregate of the percentage of the total marks secured in the written examination and of the marks secured in the personality test and taking into consideration the orders in force relating to reservation of appointments and posts for schedule caste, schedule tribe, other backward classes and others.	**9. List of selected candidates:** The Commission shall prepare a final selection list of candidates eligible for appointment in order of merit, **on the basis of the total marks secured in the written examination and the marks secured in the personality test,** taking into consideration the orders in force relating to reservation of appointments and posts for the Scheduled Castes, Scheduled Tribes, Other Backward Classes and others.

7. ಅದರಂತೆ ಈ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಜಸಂಇ 16 ಎಸ್‌ಇಎಸ್ 2023 (ಇ),</u>
<u>ಬೆಂಗಳೂರು, ದಿನಾಂಕ:17/07/2026</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರದ ಅಧಿಸೂಚನೆ ಸಂಖ್ಯೆ:ಜಸಂಇ 293 ಸೇಸಕಿ 2005, ದಿನಾಂಕ:03-12-2014 ರನ್ವಯ ಜಾರಿಗೆ ಬಂದಿರುವ ಕರ್ನಾಟಕ ಜಲಸಂಪನ್ಮೂಲ ಸೇವೆಗಳು (ನೇಮಕಾತಿ) ನಿಯಮಗಳು, 2014 ರ ಅನುಸೂಚಿ-II ರ ನಿಯಮ-4

ರಲ್ಲಿನ **Method of Recruitment** ಹಾಗೂ ನಿಯಮ-9 ರಲ್ಲಿನ **List of selected candidates** ನಿಯಮಗಳನ್ನು ಕೆಳಕಂಡಂತೆ ಮಾರ್ಪಡಿಸಿ ಕಾರ್ಯಕಾರಿ ಆದೇಶವನ್ನು ಹೊರಡಿಸಿದೆ.

SCHEDULE-II
SCHEME OF EXMAMINATION

ಪ್ರಸ್ತುತ ಇರುವ ನಿಯಮಗಳು	ಪ್ರಸ್ತಾಪಿತ ತಿದ್ದುಪಡಿ
4. Method of Recruitment: Recruitment under this scheme shall be made on the basis of the academic merit and merit secured in the competitive examination conducted by the Commission. The competitive examination shall be held on such dates and at such places as may be notified by the Commission from time to time.	**4. Method of Recruitment:** Recruitment under this scheme shall be made **on the basis of academic qualifications and the total marks secured in the written examination and the marks secured in the personality test conducted by the commission.** The competitive examination shall be held on such dates and at such places as may be notified by the Commission from time to time.
9. List of selected candidates: The commission shall prepare a final selection list of candidates eligible for appointment in the order of merit, on the basis of the aggregate of the percentage of the total marks secured in the written examination and of the marks secured in the personality test and taking into consideration the orders in force relating to reservation of appointments and posts for schedule caste, schedule tribe, other backward classes and others.	**9. List of selected candidates:** The Commission shall prepare a final selection list of candidates eligible for appointment in order of merit, **on the basis of the total marks secured in the written examination and the marks secured in the personality test,** taking into consideration the orders in force relating to reservation of appointments and posts for the Scheduled Castes, Scheduled Tribes, Other Backward Classes and others.

ಸದರಿ ಕಾರ್ಯಕಾರಿ ಆದೇಶದಲ್ಲಿ ಜಲಸಂಪನ್ಮೂಲ ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳ ಅನುಸೂಚಿ-II ರ 4 ಮತ್ತು 9 ರ ನಿಯಮಗಳಿಗೆ ತರಲಾಗಿರುವ ತಿದ್ದುಪಡಿಯನ್ನು ವ್ಯಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಿಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

ಇನ್ನುಳಿದಂತೆ ಜಲಸಂಪನ್ಮೂಲ ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳ ಅಧಿಸೂಚನೆ ಸಂಖ್ಯೆ: ಜಸಂಇ 293 ಸೇಸಕಿ 2005, ದಿನಾಂಕ:03.12.2014 ರಲ್ಲಿ ಇನ್ಯಾವುದೇ ಬದಲಾವಣೆಗಳಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹನುಮೇಗೌಡ.ಹೆಚ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸೇವೆಗಳು-ಎ)

PR-249

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 16 ಎಸ್‌ಇಎಸ್ 2023 (ಇ) ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಡಾ. ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ:17.07.2026

ತಿದ್ದುಪಡಿ ಆದೇಶ

ಕರ್ನಾಟಕ ಜಲಸಂಪನ್ಮೂಲ ಸೇವೆಗಳು (ನೇಮಕಾತಿ) ನಿಯಮಗಳು, 2014 ರ ಅನುಸೂಚಿ-I ರ ಕ್ರಮ ಸಂಖ್ಯೆ:5 ರಲ್ಲಿ ನಮೂದಿಸಲಾಗಿರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ, ವಿದ್ಯಾರ್ಹತೆಯನ್ನು ನಿಗಧಿಪಡಿಸಿ ಹೊರಡಿಸಲಾಗಿರುವ ಕಾರ್ಯಕಾರಿ ಆದೇಶ ಸಂಖ್ಯೆ: ಜಸಂಇ 114 ಎಸ್‌ಇಎಸ್ 2023 (ಇ) ದಿನಾಂಕ:04.03.2026 ರ ಆದೇಶ ಭಾಗದಲ್ಲಿ ನಮೂದಿಸಿರುವ SCHEDULE-1 ರ ಭಾಗವನ್ನು ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

SCHEDULE-1
Assistant Executive Engineer (Division-1)

Sl. No. in Schedule-I of C&R Rules	Category of Posts and Scale of pay	Minimum Qualification
(1)	(2)	(6)
5.	**Assistant Executive Engineer (Division-1) (83700-155200)**	**Direct Recruitment:** **1.** Assistant Executive Engineer (Division-1) (Civil): Must be holder of a degree in civil engineering or possess equivalent qualification granted by a University established by law in India and Institute approved by AICTE, New Delhi as specified below. **Course and Combinations:** 1. Graduate / Degree in B.E. (Civil Engineering) / (Building and Construction Technology) / (Civil Engineering and Planning) / (Civil Technology) / (Construction Engineering) / (Construction Engineering and Management) / (Construction Technology) / (Geomechanics and Structures) / (Construction Technology and Management) / (Structural and Foundation Engineering) / (Structural and Foundation Engineering and Construction) / (Structural Engineering) / (Structural Engineering and Construction) 2. Graduate / Degree in AMIE [INDIA] (Civil Engineering) / (Building and Construction Technology) / (Civil

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

		Engineering and Planning) / (Civil Technology) / (Construction Engineering and Management) / (Construction Technology) / (Construction Technology and Management)/ (Geomechanics and Structures) / (Structural and Foundation Engineering and Construction). 3. Graduate/Degree in B.Tech (Civil Engineering) / (Building and Construction Technology) / (Civil Engineering and Planning) / (Civil Technology) / (Construction Engineering and Management) / (Construction Technology) / (Construction Technology and Management) / (Geomechanics and Structures) / (Structural and Foundation Engineering and Construction). **2.** Assistant Executive Engineer (Division-1) (Mechanical): Must be holder of a degree in Mechanical engineering or possess equivalent qualification granted by a University established by law in India and Institute approved by AICTE, New Delhi as specified below. 1. Graduate / Degree in B.E. (Mechanical Engineering) 2. Graduate / Degree in AMIE [INDIA] (Mechanical Engineering) 3. Graduate/Degree in B.TECH (Mechanical Engineering)

ಇನ್ನುಳಿದಂತೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 114 ಎಸ್‌ಇಎಸ್ 2023 (ಇ) ದಿನಾಂಕ:04.03.2026 ರಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹನುಮೇಗೌಡ.ಹೆಚ್)
ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ
ಇಲಾಖೆ (ಸೇವೆಗಳು-ಎ)

PR-250

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

P S BASAVARAJU